ಕಂಡ ಕನಸಿನ ನೆನಪೇ ಇರುವುದಿಲ್ಲ; ಯಕ್ಷಗಾನದಲ್ಲಿ ಇಂಥದ್ದೊಂದು ಲೋಕ ಜಿಜ್ಞಾಸೆಯ ಚಿತ್ರಗಳಿರುತ್ತವೆ; ರಂಗದ ಮೇಲೆ ಯುದ್ಧ ಮಾಡುವ ರಾಮ–ರಾವಣರು ಚೌಕಿಮನೆಯಲ್ಲಿ ಸೀತೆಯೊಂದಿಗೆ ಬೀಡಿ ಸೇದುತ್ತಿರುತ್ತಾರೆ! ಒಂದು ಪರದೆಯ ಆಚೀಚೆ ನಡೆಯುವ ವಿಚಿತ್ರ ಪ್ರಸಂಗಗಳಲ್ಲಿ ಯಾವುದು ಸತ್ಯ? ಯಾವುದು ಸುಳ್ಳು? ಬರವಣಿಗೆ ತಂತಿಯ ಮೇಲೆ ನಡೆಯುವ ಸರ್ಕಸ್.

ಕಥೆಗಳು ಒಂದು ಭಾಷೆಯಿಂದ ಇನ್ನೊಂದಕ್ಕೆ ಒಂದು ಪ್ರದೇಶದಿಂದ ಮತ್ತೊಂದಕ್ಕೆ ಅಲೆಯುವ ವೇಷಾಂತರಿ ರೂಪಕಗಳು. ಎಲ್ಲ ಕಡೆಗಿದ್ದೂ ಅಡಗಿರುವ ಸರ್ವಾಂತರ್ಯಾಮಿಗಳು; ಕಥೆಗಾರನ ಅಂಟೇನಾ ಎಲ್ಲೇ ನಿಂತಿರಲಿ–ಸಂತೆ, ಮದುವೆ ಮಂಟಪ, ಆಸ್ಪತ್ರೆ, ಜಾತ್ರೆ, ಗುಡಿಸಲು, ಅಂಗಡಿ, ದೇಗುಲ–ಅದು ಹಾದಿ ಬೀದಿಯ ಸಾಮಾನ್ಯ ಮನುಷ್ಯನ ಅಸಾಮಾನ್ಯ ತರಂಗಗಳನ್ನು ಪ್ರಸಾರ ಮಾಡಬಲ್ಲದು. ನನಗಂತು ಕಥೆಗಳ ಹುಚ್ಚು ಹಿಡಿದದ್ದು ನನ್ನೂರಿನ ಮೂಲಕ ಋತುವಿನಂತೆ ಹಾದು ಹೋಗುತ್ತಿದ್ದ ವ್ಯಾಪಾರಿಗಳು ಮತ್ತು ಕಸಬುದಾರರಿಂದ. ಹಾವಾಡಿಗರು, ಹಕ್ಕಿನರಸಣ್ಣ, ದಿನಸಿ ಮಾರುತ್ತಿದ್ದ ಕುದುರೆ ಸವಾರರು, ಜಾದುಗಾರರು, ಸುಡಗಾಡು ಸಿದ್ಧರು, ದನದ ಸಂತೆಯ ದಳ್ಳಾಳಿಗಳು, ಶಾಲಾ ಮಾಸ್ತರು, ದನಗಾಹಿಗಳು, ಸುಗ್ಗಿ ಕುಣಿತದವರು, ಸಂಭಾವನೆ ಬ್ರಾಹ್ಮಣರು, ಬಿಡಾರದಲ್ಲುಳಿಯುತ್ತಿದ್ದ ಕೆಲಸದ ದಂಪತಿಗಳು ನನ್ನ ಕಥೆಯ ಬತ್ತದ ಝರಿಗಳು.

ನಾನು ಬರೆಯುವ ಹೊತ್ತಿಗಾಗಲೇ ನವ್ಯ ಸಾಹಿತ್ಯ ಉತ್ತುಂಗದಲ್ಲಿತ್ತು; ಯಶವಂತ ಚಿತ್ತಾಲ, ಅನಂತಮೂರ್ತಿ, ತೇಜಸ್ವಿಯವರ ಕಥನಲೋಕದಲ್ಲಿ ಓದುತ್ತಿದ್ದದ್ದು ನನ್ನ ಪರಿಸರದ ಚಿತ್ರಗಳೇ ಆಗಿದ್ದವು; ಮಣ್ಣು, ಹೆಣ್ಣು, ದೈವ, ಕಾಮ ಮತ್ತು ಕಾಡಿನೊಂದಿಗೆ ಅತ್ಯಂತ ಸಂಕೀರ್ಣ ಸಂಬಂಧ ಹೊಂದಿದ್ದ ಅವಿಭಕ್ತ ಕುಟುಂಬಗಳ ವಿಘಟನೆ ನಡೆಯುತ್ತಿದ್ದ ಕಾಲವದು; ನಾನು ಬಾಲ್ಯದಲ್ಲಿ ನೋಡಿದ ಅವಿಭಕ್ತ ಕುಟುಂಬಗಳ ಆಸ್ಥಾನ ವೈಭವ ನನ್ನ ನೆನಪಿನಲ್ಲಿದ್ದವು; ಅವುಗಳ ಸಾಮುದಾಯಿಕ ಸಂಸಾರದಲ್ಲಿ ಸೌಂದರ್ಯ ಮತ್ತು ಕ್ರೌರ್ಯಗಳು ಹಾಸುಹೊಕ್ಕಾಗಿದ್ದವು; ಒಳಸ್ತರದಲ್ಲಿದ್ದ ಸುಪ್ತ ಹೆಣಿಗೆಗಳನ್ನು ಈ ಕಥೆಗಳು ನನ್ನೊಳಗೆ ಬಿಚ್ಚುತ್ತ ಹೋದವು; ಚಿತ್ತಾಲರ ಆರಂಭಿಕ ಕಥೆಗಳು ನನ್ನ ಪುಟ್ಟ ವಿಶ್ವಕೋಶದ ಭಾವ ಪ್ರತಿಮೆಗಳನ್ನು ಉದ್ದೀಪಿಸಿದವು; ನನ್ನ ಮುಗ್ಧ ಮನೋಭಿತ್ತಿಗೆ ಅವರ ಕಥೆಗಳ ಆಪ್ತ ಲ್ಯಾಂಡ್‌ಸ್ಕೇಪ್ ಅಚ್ಚೊತ್ತಿದವು; ಅಟ್ಟದ ಮೇಲೆ ಅಪರಾಹ್ಣ ಮಲಗಿದಲ್ಲೇ ಕೇಳಿಸುತ್ತಿದ್ದ ಕದವಿಕ್ಕಿದ ನೀರವ ಹಿತ್ತಲ ಬಚ್ಚಲ ಕಟ್ಟೆಯ ಮೇಲೆ ಕುಳಿತ ಒಂಟಿ ಕಾಗೆಯ ಕೂಗು, ಕೊಯ್ಲಾದ ಗದ್ದೆಯ ಮಾಳ, ಕಿರಿದಾದ ಓಣಿಯ ತಿರುವಿನಲ್ಲಿ ಕಂದೀಲಿನ ಮಂದ ಬೆಳಕಿನಲ್ಲಿ ತಗ್ಗು ಮಾಡಿನ ಚಾದಂಗಡಿಯ ಬಾಂಕಿನಡಿಯಿಂದ ಅಗೆದ ಮಣ್ಣು ನೆಲದ ಮೇಲೆ ಜಾರುವ ಮುಸ್ಸಂಜೆ, ಉಪ್ಪರಿಗೆ ಮನೆಯ ನಡುಕೋಣೆಯ ಏಣಿಯ ಪಾವಟಿಗೆ ಏರಿ ಬರುತ್ತಿರುವವರ ನಿಗೂಢ ಸದ್ದು, ಪಾಳು ದೇಗುಲದ ಬಳಿ ಕಂಬಳಿ ಕೊಪ್ಪೆ ಹಾಕಿಕೊಂಡು ನಿಂತ ಪೊತ್ತ ಮೀಸೆಯ ಮನುಷ್ಯ ಇಂಥ ಅಸಂಗತ ಪ್ರತಿಮೆಗಳ ನಡುವೆ ಓಡಾಡಿಕೊಂಡಿದ್ದರಿಂದ ಕಥೆಗಳು ನನ್ನ ಕಣ್ಣಳತೆಯಲ್ಲೇ ಇರುವ ಅನುಭವವಾಯಿತು.

ಹಬೆಯಲ್ಲಿ ಬೇಯಿಸಿದ ಅಕ್ಕಿಹಿಟ್ಟಿನ ಉಂಡೆಯನ್ನು ಪಂಜಿ ಹರಡಿದ ಮಣೆಯ ಮೇಲಿಟ್ಟು ಬೆರಳುಗಳಿಂದ ಪಟಪಟನೆ ತಟ್ಟಿ ಅರಳಿಸಿ ಒಲೆಯ ಮೇಲಿನ ಕಾದ ಹಂಚಿನಲ್ಲಿ ಬೇಯಿಸಿದ ರೊಟ್ಟಿಯನ್ನು ನಿಗಿನಿಗಿ ಕೆಂಡದ ಮೇಲೆ ಉರುಳಿಸಿ ಉಬ್ಬಿಸುತ್ತ, ಒಲೆ ಎದುರು ಕೂತು ಚಳಿ ಕಾಯಿಸುತ್ತ ತೂಕಡಿಸುತ್ತಿದ್ದ ನನ್ನನ್ನು ಊಟದವರೆಗೆ ಎಚ್ಚರದಿಂದಿಡಲು ಅಮ್ಮ ಕಥೆ ಹೇಳಿದ